# ಮನೆಯ ಒಳಾಂಗಣದ ರೂಪದರ್ಶಿ

# ಮಾನ್ಸ್ಟೆರಾ

■ ಸೀಮಾ ಹೆಗಡೆ

**ಮನೆಯ ಒಳಾಂಗಣಕ್ಕೊಂದು ಟ್ರಾಪಿಕಲ್ ಸ್ಟೇಟ್‌ಮೆಂಟ್ ಲುಕ್ ಕೊಡುವ 'ಮಾನ್ಸ್ಟೆರಾ ಡೆಲಿಶಿಯೋಸಾ' ಪ್ರಭೇದದ ಸಸ್ಯ, ನೋಡುಗರನ್ನು ಮೋಡಿ ಮಾಡುತ್ತದೆ.**



ಅಲಂಕಾರಿಕ ಗಿಡಗಳ ಹುಚ್ಚು ಹತ್ತಿದ್ದ ಪ್ರಾರಂಭದ ದಿನಗಳು; ಓದುತ್ತಾ, ತಿಳಿಯುತ್ತಾ, ಅವುಗಳ ವರ್ಣರಂಜಿತ ಚಿತ್ರಗಳನ್ನು ನೋಡುತ್ತಾ ಸಾಗಿದ ಹಾದಿಯಲ್ಲಿ ಬಹಳವಾಗಿ ಕಾಡಿದ್ದು 'ಮಾನ್ಸ್ಟೆರಾ' ಎಂಬ ಸಸ್ಯ. ದೈತ್ಯ ಎಲೆಯ, ಗಾಢ ಹಸಿರಿನ, ಒಳಾಂಗಣಕ್ಕೊಂದು ಟ್ರಾಪಿಕಲ್ ಸ್ಟೇಟ್‌ಮೆಂಟ್ ಲುಕ್ ಕೊಡುವ 'ಮಾನ್ಸ್ಟೆರಾ ಡೆಲಿಶಿಯೋಸಾ' ಪ್ರಭೇದದ ಸಸ್ಯ ನನ್ನನ್ನು ಮೋಡಿ ಮಾಡಿತ್ತು.

ಹತ್ತಿರದ ನರ್ಸರಿಗೆ ಭೇಟಿ ಇತ್ತಾಗ ಈ ಸಸ್ಯದ ಬಗ್ಗೆ ಕೇಳಿದೆ. ಅವರು ನನ್ನ ಕೈಗಿಟ್ಟ ಆರಿಂಚು ಪಾಟಿನಲ್ಲಿರುವ ಎರಡೆಲೆಯ ಗಿಡವನ್ನು ನೋಡಿ ನನ್ನ ಮುಖ ಪೆಚ್ಚಾಗಿತ್ತು. ಹೆಸರಲ್ಲೇ ಮಾನ್‌ಸ್ಟರ್ ಇರುವ ಈ ಸಸ್ಯದ ಗಾತ್ರ ಆಕಾರವನ್ನು ರಾಕ್ಷಸ ರೀತಿಯಲ್ಲಿ ಕಲ್ಪಿಸಿಕೊಂಡಿದ್ದ ನನಗೆ ಅವರಿತ್ತ ನರಪೇತಲ ಗಿಡವನ್ನು ನೋಡಿ ಇದೇನಾ ನನ್ನ ಕನಸಿನ ಗಿಡ ಎಂಬ ಸಂದೇಹವಾಯಿತು. ಬೇಡ ಎಂದು ಬಿಟ್ಟು ಹೊರಟಾಗ ನರ್ಸರಿಯ ಮ್ಯಾನೇಜರ್ 'ಅರೇ ಮೇಡಂ; ಜಬ್ ಚೋಟಾ ಹೋತಾ ಹೈ, ಐಸಾ ಹೀ ಹೋತಾ ಹೈ; ಬಡಾ ಹೋಗಾ, ತಬ್ ದೇಖನಾ' ಎಂದಾಗ ಧೈರ್ಯ ಮಾಡಿ ಸರಿ ಎಂದು ಕೊಂಡುತಂದೆ. ಈಗ ಗಿಡದ ಶೆಲ್ಫಿನ ಮೇಲೆ ಅದರ ಸೊಬಗೇ ಬೇರೆ. ಬಂದವರೆಲ್ಲರ ಕಣ್ಣು ಮೊದಲು ಸಂಧಿಸುವುದೇ ಈ ಗಿಡವನ್ನು.

ಕೆಸುಗಡ್ಡೆಗಳ 'ಅರೇಸೇ' ಕುಟುಂಬಕ್ಕೆ ಸೇರಿದ ಮಾನ್ಸ್ಟೆರಾದ ಮೂಲ ದಕ್ಷಿಣ ಅಮೆರಿಕದ ಉಷ್ಣವಲಯ. ಸಾಮಾನ್ಯವಾಗಿ ಬೀಜಗಳು ಭೂಮಿಯಿಂದ ಮೊಳಕೆಯೊಡೆದು ಹೊರಬಂದು ಬೆಳಕನ್ನು ಅರಸುತ್ತಾ ಸಾಗಿದರೆ ಮಾನ್ಸ್ಟೆರಾ ಬೀಜಗಳು ಕತ್ತಲೆಯನ್ನು ಅರಸುತ್ತವಂತೆ! ಕತ್ತಲೆ ಅರಸಿದರೆ ಮರದ ಬುಡ ಸಿಕ್ಕೇಸಿಗುತ್ತದೆ ಎಂಬ ಚಾಣಾಕ್ಷತನ. ಮರದ ಬುಡ ಸಿಕ್ಕಿದ್ದೆ ಅಪ್ಪಿ ಬಳ್ಳಿಯಂತೆ ಹಬ್ಬುತ್ತಾ ಕೆಲಕಾಲ ಪರಾವಲಂಬಿಯಾಗಿ ಮರದಿಂದಲೇ ತನ್ನ ಹಸಿವನ್ನು ತಣಿಸಿಕೊಂಡು ಬೆಳೆದು ಮರದ ತುದಿಯ ಬೆಳಕು ಕಂಡಿದ್ದೇ ಕೊನೆಗೆ ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತದೆ!

ಮಾನ್ಸ್ಟೆರಾಗಳಲ್ಲಿ ಹತ್ತಿರತ್ತಿರ 50 ಪ್ರಭೇದಗಳಿದ್ದರೂ ಹೆಚ್ಚು ಮನೆಮಾತಾಗಿರುವುದು 'ಡೆಲೀಶಿಯೋಸಾ'. ಎಲೆಗಳ ಮೇಲೆ ನೈಸರ್ಗಿಕವಾಗಿ ಉಂಟಾಗಿರುವ ಸೀಳುಗಳಿಗೇ (ಫೆನಸ್ಟ್ರೇಷನ್ಸ್) ಈ ಗಿಡ ಫೇಮಸ್. ಇದೇನೂ ಸುಮ್ಮಸುಮ್ಮನೇ ವಿಕಸಿತವಾದ ಗುಣವಲ್ಲ. ದಟ್ಟಕಾಡಿನಲ್ಲಿ ಬೆಳಕು ಮೇಲಿನ ಎಲೆಗಳಿಗಷ್ಟೇ ಸೀಮಿತವಾಗಿರದೆ ಕೆಳಗಿನ ಎಲೆಗಳಿಗೂ ತಲುಪಲಿ ಎಂಬ ತಂತ್ರಗಾರಿಕೆ; ಜೊತೆಗೆ ಎಂತಹದ್ದೇ ಗಾಳಿ ಮಳೆಯನ್ನೂ ಗಟ್ಟಿಯಾಗಿ ಎದುರಿಸುವ ಛಲ.

ಮಾನ್ಸ್ಟೆರಾ ಬಳ್ಳಿಗಳು ಹೂಕಾಯಿ ಬಿಡುವುದೂ ಉಂಟು. ಒಂದು ವರ್ಷಗೂಡಿ ಬೆಳೆದು ಪಕ್ವವಾಗುವ ಹಣ್ಣು ತಿನ್ನಲೂ ಯೋಗ್ಯವಂತೆ; ಫ್ರೂಟ್ ಸಲಾಡ್ ರುಚಿಯನ್ನು ಹೋಲುವ ಹಣ್ಣು ಹೆಸರಿಗೆ ತಕ್ಕಂತೆ ಡೆಲೀಶಿಯಸ್ ಆಗಿರುತ್ತದೆ ಅನ್ನುವುದು ತಿಂದವರ ಅಭಿಪ್ರಾಯ. ಕಾಡಿನ ನೆರಳನ್ನು ನೆಚ್ಚಿ ಬೆಳೆವ ಗಿಡವಾಗಿದ್ದಕ್ಕೆ ಈ ಸಸ್ಯಗಳು ಒಳಾಂಗಣಕ್ಕೆ ಹೇಳಿ ಮಾಡಿಸಿದಂಥವು. ಮಣ್ಣು, ನೀರು ಎರಡರಲ್ಲೂ ಬೇರು ಬಿಡುವ ಇವುಗಳ ಸಸ್ಯಾಭಿವೃದ್ಧಿಯೂ ಸುಲಭ. ನೀರು, ಪೋಷಕಾಂಶ ನಿರ್ವಹಣೆಯೂ ಕಷ್ಟವಲ್ಲ. ಆರಂಭಿಕರೂ ಆರಾಮಾಗಿ ಬೆಳೆಸಬಹುದು.

ನಕ್ಷತ್ರಪುಂಜದ ವಿನ್ಯಾಸವನ್ನು ಹೋಲುವ ಹಸಿರುಬಿಳಿ ಮಿಶ್ರಿತ ಚುಕ್ಕೆ ಚುಕ್ಕೆ ಎಲೆಯ ಮಾನ್ಸ್ಟೆರಾ ಕಾನ್‌ಸ್ಟಿಲೇಶನ್ ಕೂಡ ನನ್ನ ಇಷ್ಟದ ಪಟ್ಟಿಯಲ್ಲಿದ್ದು, ಶೀಘ್ರವೇ ಅದೂ ನನ್ನ ಕೈ ಸೇರಲಿದೆ. ■